**ಭಾರತದ ಕಥೋಲಿಕ ಧರ್ಮಾಧ್ಯಕ್ಷರುಗಳ ಸಮ್ಮೇಳನ**
**ಪವಿತ್ರ ಗುರುವಾರದ ಪಾದಸ್ನಾನ ವಿಧಿಯ ಬಗ್ಗೆ**
**ಕಥೋಲಿಕ ಧರ್ಮಾಧ್ಯಕ್ಷರುಗಳ ಸಮ್ಮೇಳನದ ಸದಸ್ಯರಿಗೆ ಸುತ್ತೋಲೆ.**

ಎಲ್ಲಾ ಸದಸ್ಯ ಧರ್ಮಾಧ್ಯಕ್ಷರುಗಳೇ, ಸರ್ವೋಚ್ಚ ಸಂಪದರೇ, ಅನುಗ್ರಹಪಾತ್ರರೇ, ಘನವೆತ್ತವರೇ,

**ವಿಷಯ: ಪವಿತ್ರ ಗುರುವಾರ, ಪಾದಸ್ನಾನ ವಿಧಿ.**

ರೋಮಿನ ಧರ್ಮಾಧ್ಯಕ್ಷರಾಗಿ ಚುನಾಯಿತರಾದ ಮೊದಲನೆಯ ಪವಿತ್ರ ಗುರುವಾರದ ವಿಧಿಯಲ್ಲಿ ಜಗದ್ಗುರು ಫ್ರಾನ್ಸಿಸರು ರೋಮಿನ ಒಂದು ಬಂಧೀಖಾನೆಯ ಅನೇಕ ನಿವಾಸಿಗಳ ಪಾದಗಳನ್ನು ತೊಳೆದರು. ಪಾದಸ್ನಾನ ಮಾಡಿಸಿಕೊಂಡವರಲ್ಲಿ ಕೆಲವರು ಯುವತಿಯರು ಮತ್ತು ಕೆಲವರು ಕಥೋಲಿಕ ವಿಶ್ವಾಸಕ್ಕೆ ಸೇರದವರಾಗಿದ್ದರು. ಆದುದರಿಂದ ಈ ಘಟನೆ ವಿಲಕ್ಷಣ ವಿಸ್ಮಯಕ್ಕೆ ಅವಕಾಶವಾಯಿತು. ವ್ಯಾಟಿಕನ್ನಿನ ಖ್ಯಾತ್ಮಿದಾರರಾದ ವಂ. ಫ್ರೆಡರಿಕೊ ಲೊಂಬಾರ್ಡಿಯವರು: '*ಇದು ಧರ್ಮಸಭೆಯಲ್ಲಿ ಚಾಲ್ತಿಯಲ್ಲಿರುವ ವಿಧಿಯ ಬದಲಾವಣೆಯೆಂದು ಪರಿಗಣಿಸಬಾರದು*' ಎಂದು ಹೇಳಿದರೂ, ಜಗದ್ಗುರುಗಳು ಒಂದು ಸಂದೇಶವನ್ನು ನೀಡಬಹುದು ಎಂಬ ಅನಿಸಿಕೆ ಈಗ ಸ್ಪಷ್ಟವಾಗಿ ಕಂಡು ಬಂದಿದೆ.

ಸಾಕಷ್ಟು ಪರ್ಯಾಲೋಚನೆಯ ನಂತರ ಜಗದ್ಗುರುಗಳು ದೈವಾರಾಧನಾ ಮತ್ತು ಸಂಸ್ಕಾರಗಳ ಶಿಸ್ತಿನ ಮಹಾಸಮಿತಿಗೆ ಮಾರ್ಗದರ್ಶನ ನೀಡಿ ಪ್ರಭುವಿನ ಅಂತಿಮ ಭೋಜನದ ಪೂಜೆಯಲ್ಲಿ ಜರುಗುವ ಪಾದಸ್ನಾನ ವಿಧಿಯ ನಿಯಮಗಳಲ್ಲಿ ಕೆಲವು ಬದಲಾವಣೆಗಳನ್ನು ಮಾಡಲು ಅಧಿಸೂಚನೆಯನ್ನು ಹೊರಡಿಸಲು ತಿಳಿಸಿದರು. ಈ ಮಾರ್ಗಸೂಚಿ ಈ ಕೆಳಗಿನ ಬದಲಾವಣೆಗಳನ್ನು ಹೊಂದಿದೆ.

1. ಹಿಂದಿನ ಪಠ್ಯ 12 "ಪುರುಷ"ರ ಪಾದಗಳನ್ನು ತೊಳೆಯುವುದನ್ನು ಆದೇಶಿಸುತ್ತದೆ ಎಂದಿತ್ತು. ಈಗ ಅದನ್ನು "ದೈವಪ್ರಜೆ" ಎಂದು ಬದಲಾಯಿಸಬೇಕಾಗಿದೆ. ಆದುದರಿಂದ ಪುರುಷರ ಪಾದಗಳನ್ನು ಮಾತ್ರ ತೊಳೆಯುವ ನಿರ್ದೇಶನ ಮುಂದುವರಿಯುವುದಿಲ್ಲ. ಸ್ತ್ರೀಯರೂ ಸಹ ಪಾದಸ್ನಾನ ಗುಂಪಿನಲ್ಲಿ ಪಾಲ್ಗೊಳ್ಳುತ್ತಾರೆ.
2. ಈ ಹಿಂದೆ ಪಾದಸ್ನಾನ ಮಾಡಿಸಿಕೊಳ್ಳುವವರ ಸಂಖ್ಯೆ 12 (ಪುರುಷರು) ಎಂದು ಆದೇಶಿಸಲಾಗಿತ್ತು. ಈ ಹೊಸ ಅಧಿಸೂಚನೆಯಲ್ಲಿ ಸಂಖ್ಯೆಯನ್ನು ನಿರ್ದಿಷ್ಟಗೊಳಿಸಲಾಗಿಲ್ಲ. ಅದು ಹೇಳುವುದೇನೆಂದರೆ: "ಪಾಲಕರು ಭಕ್ತ ವಿಶ್ವಾಸಿಗಳಲ್ಲಿ ಒಂದು ಸಣ್ಣ ಗುಂಪನ್ನು ಆರಿಸಲಿ".
3. ಈ ಅಧಿಸೂಚನೆ ಈ ಸಣ್ಣ ಗುಂಪಿನ ಸಹಭಾಗಿಗಳು ಯಾರು ಆಗಬಹುದು ಎಂಬುದಕ್ಕೆ ಉದಾಹರಣೆಯನ್ನು ಕೊಡುತ್ತದೆ. ಅವರು ಯೌವನಸ್ಥರು, ವಯಸ್ಕರು, ಆರೋಗ್ಯವಂತರು ಮತ್ತು ರೋಗಗ್ರಸ್ಥರು, ಯಾಜಕರು, ಸಮರ್ಪಿತ ವ್ಯಕ್ತಿಗಳು ಮತ್ತು ಶ್ರೀಸಾಮಾನ್ಯರು ಆಗಿರುವುದು ಸೂಕ್ತ ಎನ್ನುತ್ತದೆ. ಆದುದರಿಂದ ಈ ಗುಂಪಿನ ಸಂಖ್ಯೆ ಮತ್ತು ಸಂಯೋಜನೆ ಒಂದೊಂದು ಧರ್ಮಕೇಂದ್ರದಲ್ಲಿ ವಿಭಿನ್ನವಾಗಿರುತ್ತದೆ. ಉದಾಹರಣೆಗೆ: ಕೆಲವು ಧರ್ಮಕೇಂದ್ರಗಳಲ್ಲಿ ಈ ಗುಂಪಿನಲ್ಲಿ ಭಾಗವಹಿಸಲು ಯಾಜಕರು ಇಲ್ಲದಿರಬಹುದು. ಆದುದರಿಂದ ಎಲ್ಲಾ ವರ್ಗದವರು ಈ ಗುಂಪಿನಲ್ಲಿರಬೇಕೆಂದು ಹರಪ್ರಯತ್ನ ಮಾಡುವ ಅಗತ್ಯವಿಲ್ಲ.

4. ಈ ಅಧಿಸೂಚನೆ ತಿಳಿಸುವಂತೆ, ಈ ಗುಂಪು "ದೈವಪ್ರಜೆಯ ಪ್ರತಿಭಾಗದ ವೈವಿಧ್ಯತೆ ಮತ್ತು ಐಕ್ಯತೆಯನ್ನು ಪ್ರತಿನಿಧಿಸುತ್ತದೆ". ಅಷ್ಟು ಮಾತ್ರವಲ್ಲ, ನಮ್ಮ ಪ್ರತಿ ಧರ್ಮಕೇಂದ್ರಗಳಲ್ಲಿ ವಿಭಿನ್ನ ಸಂಯೋಜನೆ ಇರುವುದು ಸಹಜ. ಆದಕಾರಣ, ಗುಂಪಿನ ಸದಸ್ಯರನ್ನು ಆಯ್ಕೆ ಮಾಡುವಾಗ ಈ ವಿಷಯವನ್ನು ಗಮನದಲ್ಲಿಡುವುದು ಅಗತ್ಯ.

ಹಿಂದೆ ನಿರ್ದಿಷ್ಟಗೊಳಿಸಿದಂತೆ ಸಂಖ್ಯೆ 12 ಈಗ ಖಡ್ಡಾಯವಲ್ಲ. ಈ ಸಂಖ್ಯೆ ತರ್ಕಬದ್ಧ ಹಾಗೂ ವ್ಯವಹಾರಿಕ ಎಂಬುದನ್ನು ನಾವು ಗಮನಿಸಿದ್ದೇವೆ. ಬಹು ದೊಡ್ಡ ಸಂಖ್ಯೆಯನ್ನು ಜಮಾಯಿಸುವುದರ ಮೂಲಕ, ಈ ವಿಧಿ ಅಸ್ತವ್ಯಸ್ಥವಾಗಬಹುದು. ಅಂತಯೇ ಅತಿ ಸಣ್ಣ ಸಂಖ್ಯೆ ಪಾದಸ್ನಾನ ವಿಧಿಗೆ ಸಮರ್ಪಕ ಪ್ರಾಮುಖ್ಯತೆಯನ್ನು ನೀಡಲಾರದು.

ಮುಂಬೈ ಮಹಾಧರ್ಮಕ್ಷೇತ್ರದಲ್ಲಿ ನಾನು ಗುರುಗಳಿಗೆ ಈ ಕೆಳಗಿನ ಸೂಚನೆಗಳನ್ನು ಕೊಟ್ಟಿರುತ್ತೇನೆ: "ಅಧಿಸೂಚನೆಯಲ್ಲಿ ಈ ವಿಷಯ ನಮೂದಿಸಿರದಿದ್ದರೂ ನಾನು ಕೆಲವು ಬಡವರನ್ನು / ಮೂಲೆ ಗುಂಪಾದವರನ್ನು / ಅವಕಾಶ ವಂಚಿತರನ್ನು ಈ ಗುಂಪಿನಲ್ಲಿ ಭಾಗಿಗಳನ್ನಾಗಿ ಮಾಡಬೇಕು. ಇದು ನಮ್ಮ ಪ್ರಭುವಿನ ಪಾದಸ್ನಾನ ಕ್ರಿಯೆಯ ದೀನತೆ ಮತ್ತು ಪರಪ್ರೀತಿಯನ್ನು ಸ್ಪಷ್ಟವಾಗಿ ಮೂಡಿಸುತ್ತದೆ".

ಪ್ರತಿ ಧರ್ಮಕ್ಷೇತ್ರದ ಧರ್ಮಾಧ್ಯಕ್ಷರು ತಮ್ಮ ಗುರುಗಳಿಗೆ ಸ್ಥಳೀಯ ಸನ್ನಿವೇಶಕ್ಕೆ ಅನುಗುಣವಾಗಿ ಕೆಲವು ಸೂಚನೆಗಳನ್ನು ಕೊಡಬಹುದು.

ಈ ಬದಲಾವಣೆಗೆ ಸಂಬಂಧಿಸಿದಂತೆ ನೀವು ಕೆಲವು ತೊಡಕು ಅಥವಾ ವಿರೋಧವನ್ನು ಎದುರು ನೋಡುವುದಾದರೆ, ಈ ವಿಷಯವನ್ನು ಪಾಲನಾ ಸಮಿತಿಯೊಂದಿಗೆ ಚರ್ಚಿಸಿ, ಈ ಗುಂಪನ್ನು ಸಂಯೋಜಿಸುವುದರಲ್ಲಿ ಅವರ ನೆರವನ್ನು ಪಡೆಯಬಹುದು.

ಅಂತಿಮವಾಗಿ ಈ ಅಧಿಸೂಚನೆ ಹೇಳುವುದೇನೆಂದರೆ: ಪಾದಸ್ನಾನ ಮಾಡಿಸಿಕೊಳ್ಳುವವರು ಮತ್ತು ಇತರರು ಪರಸೇವೆಯ ಬಗ್ಗೆ ಉಪದೇಶವನ್ನು ಪಡೆಯಬೇಕು. ಅದನ್ನು ನಾವು ಸಾಮಾನ್ಯವಾಗಿ ಪ್ರಬೋಧನೆಯಲ್ಲಿ ನೀಡುತ್ತೇವೆ. ಈ ವರ್ಷದಲ್ಲಿ ಮಾಡಿರುವ ಬದಲಾವಣೆ ಈ ಸಂದೇಶವನ್ನು ಸವಿಸ್ತಾರವಾಗಿ ವಿವರಿಸಲು ನಮಗಿರುವ ಸದವಕಾಶವಾಗಿದೆ.

ಪಾಸ್ಕಹಬ್ಬದ ಸಿದ್ಧತೆಗಾಗಿ ಮಾಡುವ ಪವಿತ್ರ ತ್ರಿದಿನಗಳ ಆಚರಣೆ ನಿಮ್ಮೆಲ್ಲರಿಗೆ ಫಲದಾಯಕವಾಗಿರಲಿ ಎಂದು ಹಾರೈಸುತ್ತಾ, ನನ್ನ ಆತ್ಮೀಯ ಅಭಿವಾದನೆಗಳನ್ನು ಕೋರುತ್ತೇನೆ.

ಕ್ರಿಸ್ತರ ಸೋದರತ್ವದಲ್ಲಿ ನಿಮ್ಮಲ್ಲಿ ನೆಲೆಸಿರುವ,

**+ಓಸ್ವಾಲ್ಡ್ ಕಾರ್ಡಿನಲ್ ಗ್ರೇಷಿಯಸ್**
ಮುಂಬಯಿಯ ಮಹಾಧರ್ಮಾಧ್ಯಕ್ಷರು
ಮತ್ತು ಅಧ್ಯಕ್ಷರು, ಭಾರತದ ಕಥೋಲಿಕ ಧರ್ಮಾಧ್ಯಕ್ಷರುಗಳ ಸಮ್ಮೇಳನ